# ಪುನಶ್ಚೇತನ

ವಿಮರ್ಶಾ ಲೇಖನಗಳ ಸಂಗ್ರಹ

ಪ್ರಧಾನ ಸಂಪಾದಕರು

**ಪ್ರೊ. ನೀಲಗಿರಿ ತಳವಾರ**

ಸಂಪಾದಕರು

**ಡಾ. ಸಿ.ಟಿ. ಜಯಣ್ಣ**

**ಡಾ. ಅಶೋಕ ಜಿ.ಎಸ್.**



ಪುನಶ್ಚೇತನ

ಅವಲೋಕನ, ಅಧ್ಯಯನ, ಆಲೋಚನೆ, ಅನುಭವಗಳೇ ಅಭಿವ್ಯಕ್ತಿಯ ಸಮಗ್ರ ನೆಲೆ. ಅಧ್ಯಾಪನವು ಒಂದು ಪರಿಣಾಮಕಾರಿ ಅಭಿವ್ಯಕ್ತಿ. ಅದೊಂದು ಏಕಮುಖಿ ಅಭಿವ್ಯಕ್ತಿಯಾಗಿರದೆ ಪರಿಣಾಮ, ಪ್ರಮಾಣ, ಪ್ರತಿಕ್ರಿಯೆ ಆಶಯದ ಸಂವಹನವಾಗಿದೆ. ಆ ದೃಷ್ಟಿಯಿಂದ ಅಧ್ಯಾಪನ ಒಂದು ಪರಿಣಾಮಕಾರಿ ಸಂವಹನ ಕ್ರಿಯೆ. ಕ್ರಿಯೆ ಬಹುತ್ವಗೊಂಡು ಚಟುವಟಿಕೆ. ಚಟುವಟಿಕೆಯ ನಿರಂತರತೆಯೇ ವೃತ್ತಿ ಅಥವಾ ಪ್ರವೃತ್ತಿ. ಪರಿಣಾಮಕಾರಿ ಅಧ್ಯಾಪನಕ್ಕೆ ಪ್ರಭಾವಿ ಪ್ರೇರಣೆ ಎಂದರೆ ವಿದ್ಯಾರ್ಥಿಗಳ ಇಂದಿನ ಕಲಿಕೆ ಮತ್ತು ನಾಳಿನ ಬದುಕು. ಆ ಪ್ರೇರಣೆಯೇ ಮತ್ತೆ ಅಧ್ಯಾಪಕನ ವೃತ್ತಿಶಕ್ತಿ ಸಂವರ್ಧನಕ್ಕೆ ಪುನಃ ಪ್ರೇರಣೆ. ಹಾಗಾಗಿ, ಬೋಧನೆ ಮತ್ತು ಕಲಿಕೆಗಳು ಅಧ್ಯಾಪಕನ ಸ್ವಯಂ ಶಕ್ತಿ ಸಂವರ್ಧನ ಪ್ರಕ್ರಿಯೆಗಳು. ಇದಕ್ಕೆ ಬೇಕಾದ ನಿರಂತರ ತಯಾರಿ ಅವಕಾಶವೇ ಚೇತನ ಮತ್ತು ಪುನಶ್ಚೇತನ ತರಬೇತಿ.

ಕಲಿಕೆ, ಬೋಧನೆ, ಸಂಶೋಧನೆ, ಬರಹ, ಪ್ರಕಟಣೆ ಮತ್ತು ಪ್ರಕಾಶನಗಳಲ್ಲಿ, ತೊಡಗಿಸಿಕೊಳ್ಳಲು ಪ್ರೇರಣೆ ನೀಡುವ ಈ ತರಬೇತಿಯ ಸಂದರ್ಭಗಳಲ್ಲಿ ಅವುಗಳ ಮಾದರಿಗಳನ್ನು ತಯಾರಿಸುವ ಅಭ್ಯಾಸ ಕ್ರಮವೂ ಒಂದು. ಅಂಥ ಸಂದರ್ಭಗಳಲ್ಲಿ ಬೋಧನಾ ವಿದ್ಯಾರ್ಥಿಗಳಾದ ಅಧ್ಯಾಪಕರುಗಳು, ತಮ್ಮ ಆಸಕ್ತಿ ವಿಷಯದ ಆಯ್ದು, ಅಧ್ಯಯನಿಸಿದ ಮತ್ತು ಪ್ರತಿಕ್ರಿಯೆಯ ಅಭಿವ್ಯಕ್ತಿಸಿದ ಲೇಖನಗಳ ಸಂಗ್ರಹ ಪುಸ್ತಿಕೆ 'ಪುನಶ್ಚೇತನ', ಒಂದು ಮೌಲಿಕ ಕೃತಿಯಾಗಿದೆ. ಅಧ್ಯಾಪನ ಮತ್ತು ಸಂಶೋಧನಾ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುವ ವೃತ್ತಿ ಪ್ರವೃತ್ತಿ ನಿರತರಲ್ಲಿ ಅಧ್ಯಯನಾಸಕ್ತಿ ಮತ್ತು ಕ್ರಿಯಾ ಪ್ರೇರಣೆಗಳನ್ನು ತರುವಂತಹುದಾಗಿದೆ. ಕನ್ನಡ ಸಾಹಿತ್ಯ ಚರಿತ್ರೆಯ ವಿವಿಧ ಕಾಲಘಟ್ಟಗಳ ದಿಶೆ-ದಿಕ್ಸೂಚಿಯಾಗಿ, ಕ್ರಮಿಸುವ ಮಾರ್ಗದಲ್ಲಿನ ಮೈಲುಗಲ್ಲುಗಳಾಗಿ ಹಳೆಗನ್ನಡ, ನಡುಗನ್ನಡ, ಹೊಸಗನ್ನಡ, ಜಾನಪದ ಮೊದಲಾಗಿ, ಮಹಿಳಾ ಸಂವೇದನೆ ಸಾಹಿತ್ಯ ಒಳಗೊಂಡು ವೈವಿಧ್ಯವೂ, ಸಮಗ್ರವೂ ಆಗಿದೆ. ಅಧ್ಯಯನ ಪ್ರೇರಣಾ ಪುಸ್ತಿಕೆಯಾಗಿದೆ. ಎಲ್ಲ ಲೇಖಕರ ಲೇಖನಗಳು ಚಿಂತನಪೂರಕವಾಗಿವೆ. ಸಂಶೋಧನಾ ಮಾರ್ಗಾನುಕರಣೆಗೆ ಮಾದರಿಯಾಗಿವೆ. ಎಲ್ಲರಿಗೂ ಅಭಿನಂದನೆಗಳು. ಲೇಖಕರು ಮತ್ತು ಸಂಪಾದಕರುಗಳ ಈ ಪ್ರಯತ್ನ ನಿರಂತರವಾಗಿ ಬೋಧನೆ ಮತ್ತು ಕಲಿಕಾ ವಲಯಗಳಲ್ಲಿ ಅಪೇಕ್ಷಿತ ಬದಲಾವಣೆಗಳಾಗಲಿ ಎಂದು ಆಶಿಸುತ್ತೇನೆ.

ಬಸವ ಪ್ರೇರಣೆಗಳೊಂದಿಗೆ,

ಡಾ. ಶಿವಮೂರ್ತಿ ಮುರುಘಾ ಶರಣರು

ISBN 819344191-5
9788193441916

ಅಲ್ಲಮಪ್ರಭು ಸಂಶೋಧನ ಕೇಂದ್ರ
ಶ್ರೀ ಜಗದ್ಗುರು ಮುರುಘರಾಜೇಂದ್ರ ಗ್ರಂಥಮಾಲೆ
ಬಸವಕೇಂದ್ರ, ಶ್ರೀ ಮುರುಘಾಮಠ, ಚಿತ್ರದುರ್ಗ - 577 502

**PUNASHECHTHANA :** Collection of Critick Essay's.

Published by
**Allamaprabhu Samshodhana Kendra**
Sri Jagdguru Murugarajendra Granthamale
Basavakendra, Sri Murughamata, Chitradurga 577 502

First Edition : 2019

Pages : 376

Copies : 1000

Price: 400/-

Size : Demy 1/8

Paper Used : 70 GSM NS Maplitho

© : Reserved

ISBN: 978-81-93441-91-6

ಪ್ರಥಮ ಮುದ್ರಣ: 2019

ಪುಟಗಳು: 376

ಪ್ರತಿಗಳು: 1000

ಬೆಲೆ: 400/-

ಅಳತೆ: ಡೆಮಿ 1/8

ಕಾಗದ: 70 ಜಿಎಸ್‌ಎಂ ಎನ್.ಎಸ್. ಮ್ಯಾಪಲೀಥೊ

ಮುಖಪುಟ ವಿನ್ಯಾಸ : ಎಸ್. ಮಂಜುನಾಥ್

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233

## ಸಂಪಾದಕ ಮಂಡಳಿ

ಡಾ. ಪಿ. ನಾಗರಾಜ

ಡಾ. ಕೆ. ಚಂದ್ರಕಾಂತ್

ಡಾ. ರುದ್ರೇಶ್ ಅದರಂಗಿ

ಡಾ. ಶಿವಕುಮಾರ ಕಾರೇಪುರ

ಡಾ. ಭಾರತೀದೇವಿ ಪಿ.

ಗುರುಸ್ವಾಮಿ ಆರ್.

ಡಾ. ಎಂ. ರಂಗಸ್ವಾಮಿ

ಜಯಕುಮಾರಿ ಬಿ.ಆರ್.

ಡಾ. ಗೋವಿಂದರಾಯ ಎಂ.

ಡಾ. ರಿಯಾಜ್ ಪಾಷಾ

ಡಾ. ಕಾವೇರಿ ಎನ್.ಪಿ.

ಡಾ. ಕುಮಾರ ಬೆಳಲೆ

ಡಾ. ರೇಣುಕಪ್ರಸಾದ್ ಬಿ.ಆರ್.

ჯჯჯ

24. ಕುವೆಂಪು ಕವನಗಳಲ್ಲಿ ವೈಚಾರಿಕತೆ / 210
ಜಯಕೀರ್ತಿ
25. ಗೊರೂರರ 'ನಮ್ಮ ಊರಿನ ರಸಿಕರು' / 213
ದೇವರಾಜ್ ಹೆಚ್.ಡಿ.
26. ಕೆ.ವಿ. ಅಯ್ಯರ್ ರವರ 'ಶಾಂತಲ' / 218
ಎನ್.ಎ. ಶಂಕರಲಿಂಗೇಗೌಡ
27. 'ಶಬರಿ' ಒಂದು ಓದು / 221
ಶರ್ಮಿಳಾ ವಿ.ಎನ್.
28. ಗಿರಡ್ಡಿಯವರ ಕೃತಿಗಳಲ್ಲಿ ವಿಚಾರ ವಿಮರ್ಶೆ / 226
ಡಾ. ಎಂ.ಎಸ್. ಮಹದೇವ
29. ನೇಮಿಚಂದ್ರರ ಕತೆಗಳಲ್ಲಿ ಕುಟುಂಬ ರಚನಾ ವಿನ್ಯಾಸ / 231
ಸವಿತ ಜಿ.
30. ಸುಜನಾ ಅವರ 'ಚಿಲಿಪಿಲಿ' ಕವನ ಸಂಕಲನದ ವೈಶಿಷ್ಟ್ಯ / 239
ಬಸವರಾಜು ಕೆ.
31. ರಂಗಭೂಮಿಯ ಮೂಲಕ ಸಾಮಾಜಿಕ ಬದಲಾವಣೆ / 246
ಡಾ. ಅಜ್ಜಪ್ಪ ಜಿ.ಇ.
32. ಕನ್ನಡ ಸಾಹಿತ್ಯದಲ್ಲಿ ನಾ ಕಂಡ ಹಾಸ್ಯ / 252
ಡಾ. ಮಂಜುಳ ಎಂ.ಕೆ.
33. ಕನ್ನಡ ಭಾಷೆ : ಸವಾಲುಗಳು ಮತ್ತು ಸಾಧ್ಯತೆಗಳು / 257
ಡಾ. ನಳಿನ ಎನ್.
34. ಕಂಪ್ಯೂಟರ್‌ನಲ್ಲಿ ಕನ್ನಡ ಬಳಕೆ / 264
ಡಾ. ರಿಯಾಜ್ ಪಾಷ
35. ಸಾಹಿತ್ಯದ ಒಂದು ವಿದ್ಯುನ್ಮಾನ ಮಾಧ್ಯಮ 'ವಾಟ್ಸಪ್' / 267
ಮಹೇಶ್ ಯು.ಸಿ.
36. ಮೈಸೂರು ಪ್ರಾಚ್ಯವಿದ್ಯಾ ಸಂಶೋಧನಾಲಯ / 272
ಡಾ. ರುದ್ರೇಶ್ ಅದರಂಗಿ
37. ಸೂಳೆ ಸಂಕವ್ವೆ ನಾಟಕದಲ್ಲಿ ಸಮಾಜಮುಖಿ ಚಿಂತನೆ / 278
ಡಾ. ಸಿ. ಕೊಟ್ರಪ್ಪ

# 34. ಕಂಪ್ಯೂಟರ್‌ನಲ್ಲಿ ಕನ್ನಡ ಬಳಕೆ

ಡಾ. ರಿಯಾಜ್ ಪಾಷ

ಕನ್ನಡ ನಾಡು ನುಡಿಯ ಕುರಿತಾದಂತೆ ಪ್ರತಿಯೊಬ್ಬ ಕನ್ನಡಿಗನಿಗೂ ಕಾಳಜಿ, ಅಭಿಮಾನವಿದೆ. ಸ್ವಾತಂತ್ರ್ಯೋತ್ತರ ಭಾರತದಲ್ಲಿ ಪ್ರಾದೇಶಿಕ ಭಾಷೆಗಳು, ಆಯಾ ಪ್ರದೇಶದ ಸಂಸ್ಕೃತಿಗಳು ಅವಸಾನದ ಅಂಚು ತಲುಪುತ್ತಿರುವ ಸಂದರ್ಭದಲ್ಲಿ ಇಂತಹ ಅಭಿಮಾನದ ಜೊತೆಗೆ ಎಲ್ಲರನ್ನೂ ಬಡಿದೆಚ್ಚರಿಸುವ ಕೆಲಸವನ್ನು ಮಾಡಬೇಕಾದ ಅವಶ್ಯಕತೆ ಇದೆ. ಆದ್ದರಿಂದಲೇ ಬರಗೂರು ರಾಮಚಂದ್ರಪ್ಪನವರು ಕನ್ನಡಾಭಿಮಾನವೆಂದರೆ ಕೇವಲ 'ಗತವೈಭವದ ಕನವರಿಕೆಯಲ್ಲ; ಕನ್ನಡಾಭಿಮಾನವು ಸದಾ ಸಮಕಾಲೀನವಾಗುತ್ತಾ ಹೋಗುವ ಸಾರ್ಥಕ ಸಂವೇದನೆ ಎನ್ನುವುದು. ಸಮಕಾಲೀನವಾಗುವುದು ಎಂದರೆ ಆಯಾ ಕಾಲಘಟ್ಟದ ಬದಲಾವಣೆಗಳಿಗೆ, ಸ್ಥಿತ್ಯಂತರಗಳಿಗೆ ಸ್ಪಂದಿಸುವುದು ಎಂದರ್ಥ. ಈ ಹಿನ್ನೆಲೆಯಲ್ಲಿ ಇಂದಿನ ಅನಿವಾರ್ಯತೆ ಕಂಪ್ಯೂಟರೀಕರಣ. ಎಲ್ಲವನ್ನೂ ಕಂಪ್ಯೂಟರ್ ಮೂಲಕ ಕಾಣುವ ಯುಗದಲ್ಲಿ ನಾವು ಬದುಕುತ್ತಿದ್ದೇವೆ. ಸಮಕಾಲೀನ ಕಾಲಘಟ್ಟದಲ್ಲಿ ಕಂಪ್ಯೂಟರ್ ಕಲಿಯದವನು ಅನಕ್ಷರಸ್ಥನೇ ಸರಿ. ವಿದ್ಯಾವಂತ ಸಮಾಜ ಅದರಲ್ಲೂ ಸರ್ಕಾರಿ ಕೆಲಸಕ್ಕೆ ಸೇರಬಯಸುವ ಯುವಕ ಕಂಪ್ಯೂಟರ್‌ನಲ್ಲಿ ಪಾರಂಗತನಾಗಿರಲೇಬೇಕು. ಏಕೆಂದರೆ ಸರ್ಕಾರ ಕಂಪ್ಯೂಟರ್ ಪರೀಕ್ಷೆಯನ್ನು ಕಡ್ಡಾಯಗೊಳಿಸಿ ಪ್ರಥಮ ದರ್ಜೆಯಲ್ಲಿ ಪಾಸು ಮಾಡಿದರೆ ಮಾತ್ರ ಪರೀಕ್ಷಾರ್ಥಕ ಅವಧಿ ಘೋಷಿಸುವುದೆಂದು ಆದೇಶಿಸಿದೆ.

ಕಂಪ್ಯೂಟರ್ ಕ್ರಿಯಾಶೀಲತೆಗೆ, ಸೃಜನಶೀಲತೆಗೆ ಪ್ರೇರೇಪಿಸುವ ಶಕ್ತಿಯುತವಾದ ತಿಳಿವಳಿಕೆಯ ಹಾಗೂ ಕಲಿಕೆಯ ಸಾಧನವಾಗಿದೆ. ಕಂಪ್ಯೂಟರ್‌ಗಳ ಮೂಲಕ ಪುಟಗಳನ್ನು, ಕಡತಗಳನ್ನು ವಿನಿಮಯ ಮಾಡಿಕೊಳ್ಳುವುದೇ ಹೊಸಕ್ರಾಂತಿಕಾರಿ ಆವಿಷ್ಕಾರವೆಂದು ತಿಳಿದಿದ್ದ ಈ ಜಗತ್ತು ಅದರಲ್ಲಿ ಬಹಳಷ್ಟು ಸಂಶೋಧನೆಗಾಗಿ ಅನೇಕ ಅನುಕೂಲಗಳನ್ನು ಮಾಡಿಕೊಟ್ಟಿದೆ. ಕಂಪ್ಯೂಟರ್‌ನಲ್ಲಿ ಓದುವಿಕೆ, ಬರವಣಿಗೆ, ಬ್ಯಾಂಕಿಂಗ್, ವೈದ್ಯಕೀಯ, ಆಡಳಿತ, ಬಸ್, ರೈಲು, ವಿಮಾನ ಪ್ರಯಾಣ, ಶಿಕ್ಷಣ ಅಂಚೆ-ತಂತಿ, ಇಂಜಿನಿಯರಿಂಗ್, ಮುದ್ರಣ, ಇತ್ಯಾದಿ ಎಲ್ಲಾ ಕ್ಷೇತ್ರಗಳ ಕೆಲಸಗಳನ್ನು ಸುಲಲಿತವಾಗಿ ಮಾಡಬಹುದು. ಇದು ಸಾಧ್ಯವಾಗಬೇಕಾದರೆ ಕಂಪ್ಯೂಟರ್‌ನಲ್ಲಿ ಸಂಬಂಧಪಟ್ಟ